ಆತ್ಮವೇ... ನೀನು ಕಾಯಿಲೆ ಮಲಗಿರೋದು ನನ್ನಿಂದಾಗಿ ಅಲ್ಲ. ನಿನಗೆ ಗೊತ್ತು ನೀನು ನನಗೆ ತುಂಬ ಚೆನ್ನಾಗಿರೋದನ್ನೇ ಕೊಟ್ಟಿದ್ದೀಯಾ ಅಂತ... ತುಂಬ ತುಂಬ ಚೆನ್ನಾಗಿರೋದನ್ನೇ ಕೊಟ್ಟಿದ್ದೀಯ. ನನ್ನ ಕಾಮ್ರೇಡ್‌ಗಳು ಇದರ ಹೊರತಾಗಿ ಬೇರೇನೂ ಕೇಳೋದಕ್ಕೆ ಸಾಧ್ಯವಾಗೋದಿಲ್ಲ. ಅಮ್ಮಮ್ಮ ಅಂದರೆ ಅವರು ನಿನ್ನಿಂದ ಕೆಲವು ಪದಗಳನ್ನ ನಿರೀಕ್ಷಿಸಬಹುದು ಅಷ್ಟೆ. ಯಾಕೆಂದರೆ ನೀನು ಅವರನ್ನ ಎಲ್ಲ ಹೆಸರುಗಳನ್ನೂ ಹಿಡಿದು ಕರೆದುಬಿಟ್ಟಿದ್ದೀಯ... ಅಲ್ಲದೆ ನೀನು ಅವರಿಗೆಲ್ಲ ಮುಷ್ಟಿ ಬಿಗಿಹಿಡಿದು ಹೊಡೆದೂ ಇದ್ದೀಯ... ಇಷ್ಟಾದರೂ ನನಗೆ ನಿನ್ನ ಕಂಡರೆ ಇಷ್ಟ! ನನ್ನ ಆತ್ಮಕ್ಕಿಂತ ಹೆಚ್ಚಾಗಿ ನಾನು ನಿನ್ನನ್ನ ಇಷ್ಟಪಡ್ತೀನಿ. ನಿನ್ನ ಗೌರವಿಸ್ತೀನಿ. ನಾನ್ಯಾಕೆ ನಿನ್ನ ಅಷ್ಟೊಂದು ಇಷ್ಟಪಡ್ತೀನಿ ಅಂತ ವಿವರಿಸು ದೊರೆ... ನೀನು ನನ್ನ ಕುಲದವನಲ್ಲ, ಸಂಬಂಧಿಕನಲ್ಲ, ನೀನು ನನ್ನ ಹೆಂಡತಿ ಅಲ್ಲ... ಆದರೆ ನೀನು ಕಾಯಿಲೆ ಮಲಗಿದ್ಯ ಅಂತ ಕೇಳಿದ ಕೂಡಲೆ ನನ್ನ ಹೃದಯಕ್ಕೆ ಘಾಸಿಯಾಯ್ತು...'

ಶಿಚಿಪ್‌ತ್ಸೋವ್ ಜೊತೆ ಜುಕೋವ್ ತುಂಬ ಹೊತ್ತು ಕಳೆದ. ತನ್ನ ಪ್ರೀತಿಯನ್ನ ಪ್ರಕಟಿಸಿದ. ಶಿಚಿಪ್‌ತ್ಸೋವ್‌ಗೆ ಮುತ್ತಿಕ್ಕುವುದು ಅಪ್ರಸ್ತುತ ಅನಿಸಿತು. ಇಂಥ ಸಂದರ್ಭಗಳಲ್ಲಿ ಎಂದಿನಂತೆ ಭಾವಪೂರ್ಣವಾಗಿ ನಗುತ್ತಿದ್ದವನು ಆ ಹೊತ್ತು ಅದರಿಂದ ಹೊರಬರಬೇಕೆನಿಸಿ ನಗದೆ ಸುಮ್ಮನಾದ. ಆದರೆ ಪ್ರಜ್ಞೆ ತಪ್ಪಿ ಬೀಳುವುದರಲ್ಲಿ ಅರ್ಥವಿದೆ ಅನಿಸಿದರೂ ತಾನೀಗ ಮನೆಯಲ್ಲೋ, ಥಿಯೇಟರ್‌ನಲ್ಲೋ ಇಲ್ಲ ಎಂಬುದನ್ನು ನೆನಪಿಸಿಕೊಂಡು ಆ ಯೋಚನೆ ಕೈಬಿಟ್ಟು ಹೊರನಡೆದ.

ಅವನ ನಿರ್ಗಮನದ ನಂತರ ಅಡಬಶೇವವ್ ರೂಮು ಪ್ರವೇಶಿಸಿದ. ನಾಟಕಗಳಲ್ಲಿ ದುರಂತದ ಪಾತ್ರಗಳನ್ನ ಮಾಡುವ ನಟ ಅವನು. ಗಲೀಜು ಮುಖದ, ಮಂದ ದೃಷ್ಟಿಯ, ಮೂಗಿನ ಮೂಲಕ ಮಾತಾಡುತ್ತಿದ್ದವನು. ಅವನು ರೂಮನ್ನು ಒಳ ಹೊಕ್ಕು ಬಹಳ ಹೊತ್ತು ಹಾಗೇ ಶಿಚಿಪ್‌ತ್ಸೋವ್‌ನನ್ನ ನೋಡಿ ನಂತರ ಅವನ ಹತ್ತಿರಕ್ಕೆ ನಡೆದು ಹೇಳಿದ..

'ನಿನಗೆ ಗೊತ್ತಾ ಮಿಫಾ?...' ಅಂದ. 'ಮಿಶ' ಅನ್ನುವುದು ಶಿಚಿಪ್‌ತ್ಸೋವ್ ನಾಟಕಗಳಲ್ಲಿ ವಹಿಸುತ್ತಿದ್ದ ಪಾತ್ರದ ಹೆಸರು. ಅಡಬಶೇವ್ 'ಶ' ಅನ್ನುವ ಕಡೆ 'ಫ' ಅಂದಿದ್ದ. ಅದು ಅವನ ಮೂಗಿನ ಉಚ್ಚಾರಣೆಯಿಂದ ಬಂದದ್ದಾಗಿತ್ತು. ಹೀಗೆ ಹೇಳಿ ತನ್ನ ಮುಖದ ಮೇಲೆ ನಿಗೂಢ ಭಾವ ಪ್ರಕಟಿಸಿದ.

'ಏನು ಗೊತ್ತಾ? ನೀನು ಹರಳೆಣ್ಣೆಯ ಇನ್ನೊಂದು ಡೋಸ್ ತಗೋಬೇಕು...' ಎಂದ.

ಶಿಚಿಪ್‌ತ್ಸೋವ್ ನಿಶ್ಶಬ್ದವಾಗೇ ಇದ್ದ. ಅಡಬಶೇನ್ ಕೂಡ ನಿಶ್ಶಬ್ದವಾದ. ಆದರೆ ಕೆಲ ಸಮಯದ ನಂತರ ತಾನೇ ಹರಳೆಣ್ಣೆಯನ್ನ ಕುಡಿದು ಹೊರನಡೆದ.

ಎರಡು ಗಂಟೆಯ ನಂತರ ಎವ್ಲಾಂಪಿ ರೂಮು ಪ್ರವೇಶಿಸಿದ. ಅವನ ನಿಜವಾದ ಹೆಸರು ರಿಗೊಲೆಟ್ಟೊ. ನಾಟಕದ ಕಂಪೆನಿಯಲ್ಲಿ ಹೇರ್ ಡ್ರೆಸ್ಸಿಂಗ್ ಮಾಡಿಕೊಂಡಿದ್ದ ಅವನನ್ನ ನಟರು ಎವ್ಲಾಂಪಿ ಎಂದು ಕರೆಯುತ್ತಿದ್ದರು.

ಆತ ಕೂಡ ದುರಂತ ಪಾತ್ರದಾರಿ ಅಡಬಶೇವ್ ರೀತಿಯಲ್ಲೇ ಶಿಚಿಪ್‌ತ್ಸೋವ್‌ನನ್ನ ಬಹಳ ಹೊತ್ತು ದಿಟ್ಟಿಸಿ ಉಗಿಬಂಡಿಯ ಹಾಗೆ ನಿಟ್ಟುಸಿರು ಹೊರಕ್ಕೆ ಚೆಲ್ಲಿ ನಿಧಾನಕ್ಕೆ ತನ್ನ ಸಂಗಡ ತಂದಿದ್ದ ಪಾರ್ಸೆಲ್ ಪೊಟ್ಟಣವೊಂದನ್ನ ಬಿಚ್ಚತೊಡಗಿದ. ಅದರಲ್ಲಿ ಇಪ್ಪತ್ತು ವೈದ್ಯರ ಬಳಿ ಇರುವಂಥ ಕಪ್‌ಗಳು ಹಾಗು ಕೆಲವು ಪುಟ್ಟ ಫ್ಲಾಸ್ಕ್‌ಗಳು ಇದ್ದವು.

'ನೀನು ನನಗೆ ಮೊದಲೇ ಹೇಳಿ ಕಳುಹಿಸಿದ್ದರೆ ಆಗ್ತಿತ್ತು. ನಾನು ನಿನಗೆ ಹೊದೆಸಿ ನಿನ್ನನ್ನ